ಜೊತೆಗೆ ಈಗತಾನೆ ಚರ್ಚೆಮಾಡಿದ್ದೇವೆ. ಅವರಿಗೆ ನಾನು ಪ್ಯಾನಲ್ ಆಫ್ ನೇಮ್ಸ್ ಕೊಟ್ಟಿದ್ದೇನೆ. ಅದರಲ್ಲಿ ಒಬ್ಬೊಬ್ಬರನ್ನು ಲ್ಯಾಂಡ್ ಟ್ರಿಬ್ಯುನಲ್‌ಗಳಲ್ಲಿ ನಮ್ಮ ಜೊತೆಗೆ ಆಲೋಚನೆ ಮಾಡಿ ಸೇರಿಸಿಕೊಳ್ಳುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ ರೀತಿ ಮಾಡುತ್ತಾರೆಂದು ನಾವು ಬಲವಾಗಿ ನಂಬಿಕೊಂಡಿದ್ದೇವೆ. ಅವಲ್ಲದೇ ಹೊಸದಾಗಿ ರೆಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ಹಿಂದಿನ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂಥ ಹೆಸರುಗಳನ್ನು ಸೇರಿಸಿದ್ದರು. ಅದೇ ರೀತಿಯಾಗಿ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಕೆಲವು ಹೆಸರುಗಳನ್ನು ಕೊಡುತ್ತೇನೆ. ಅದನ್ನು ಅವರು ಪರ್ಯಾಲೋಚನೆ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಇದುವರೆಗೆ ಕೈಕೊಂಡಿದ್ದಂಥ ಧರಣಿಯನ್ನು ನಾವು ಹಿಂತೆಗೆದುಕೊಂಡಿದ್ದೇವೆ. ಮತ್ತು ಮಾನ್ಯ ಮುಖ್ಯಮಂತ್ರಿಯವರು ನಮಗೆ ಕೊಟ್ಟಿರತಕ್ಕಂಥ ಆಶ್ವಾಸನೆಯನ್ನು ಪೂರೈಸಿಕೊಡುತ್ತಾರೆ ಎಂದು ಸಪ ನಾವು ತಿಳಿದುಕೊಂಡಿದ್ದೇವೆ. ಈ ಸಭೆಯ ಮುಂದಿನ ಕಾರ್ಯಕಲಾಪಗಳನ್ನು ನಡೆಸಿಕೊಡು ಹೋಗಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

(The Dharna was called of)

STARRED QUESTIONS

(to which oral answers were given)

Semi-Luxury night buses on Bangalore-Hassan-Mangalore route.

826. Dr. DAMODAR MULKY (Moodabidri).—Will the Minister for Transport and Tourism be pleased to state ;—

(*a*) whether there is any p oposal before Government to introduce semi-luxury night buses instead of luxury buses on Bangalore-Hassan -Mangalore routes :

(*b*) if so, the stage at which the proposal stands ?

SRI R. GUNDU RAO (Minister for Transport and Tourism).—

(*a*) There is no such proposal with the K.S.R.T.C.

(*b*) Does not arise in view of the replies to clause (*a*) above.

ಶ್ರೀ ದಾಮೋದರ ಮೂಲ್ಕಿ.—ಸ್ವಾಮಿ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಅಂತಹ ಯಾವ ಸಲಹೆಯೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಲ್ಲಿಲ್ಲ ಎಂದು ಹೇಳಿದ್ದೀರಿ. ಆದರೆ ೨ ತಿಂಗಳ ಮೊದಲು ನಾನು ಇದೇ ಪ್ರಶ್ನೆಯನ್ನು ಕೇಳಿದಾಗ ಅಂತಹ ಒಂದು ಸಲಹೆ ಇತ್ತು, ಆದರಂತೆ ಈಗಾಗಲೇ ತಾವು ಎಲ್ಲಾ ಲಗ್ಜುರಿ ಬಸ್‌ಗಳನ್ನೂ ಸೆಮಿ ಲಗ್ಜುರಿ ಬಸ್‌ಗಳನ್ನಾಗಿ ಪರಿವರ್ತಿಸಿದ್ದೀರಿ. ಈಗ ಓಡುತ್ತಿರುವ ಬಸ್‌ಗಳೆಲ್ಲಾ ಸೆಮಿ ಲಗ್ಸುರಿ ಬಸ್‌ಗಳಾಗಿವೆ. ಅಂದರೆ ಇದರ ಅರ್ಥ ಏನು ಎಂದು ಹೇಳುತ್ತೀರಾ?

† ಶ್ರೀ ಆರ್. ಗುಂಡೂರಾವ್.—ಹಿಂದೆ ಮಾಡಿದಂಥ ಸೆಮಿ ಲಗ್ಸುರಿ ಬಸ್‌ಗಳನ್ನು ಈಗ ಓಡಿಸುತ್ತಿರುವುದು ನಿಜ. ಈಗ ಆವುಗಳನ್ನೆಲ್ಲಾ ಲಗ್ಸುರಿ ಬಸ್‌ಗಳನ್ನಾಗಿ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿರುವುದರಿಂದ ಇನ್ನು ಮುಂದೆ ಲಗ್ಸುರಿ ಬಸ್‌ಗಳನ್ನು ಸೆಮಿ ಲಗ್ಸುರಿ ಬಸ್‌ಗಳನ್ನಾಗಿ ಮಾಡುವ ಆಲೋಚನೆ ನಮಗೆ ಇಲ್ಲ.

---

† *indicates that remarks or Speeches have not been revised by the member concerned.*

ಶ್ರೀ ದಾವೋದರ ಮೂಲ್ಕಿ.—ಸ್ವಾಮಿ, ಈಗ ಅಲ್ಲಿ ಎಲ್ಲಾ ಸೆಮಿಲಗ್ಸುರಿ ಬಸ್‌ಗಳೇ ಓಡಾಡುತ್ತಿವೆ. ಹಿಂದೆ ಅಲ್ಲಿ ೧೨ ಲಗ್ಸುರಿ ಬಸ್‌ಗಳು ಓಡಾಡುತ್ತಿದ್ದವು. ಈಗ ಒಂದು ಲಗ್ಸುರಿ ಬಸ್ ಮಾತ್ರ ಓಡುತ್ತಿದೆ. ಆದರೆ ತಮ್ಮ ಉತ್ತರದಲ್ಲಿ ಲಗ್ಜುರಿ ಬಸ್ಸುಗಳಿಗೆ ಬದಲಾಗಿ ಸೆಮಿ ಲಗ್ಜುರಿ ಬಸ್‌ಗಳನ್ನು ಪ್ರಾರಂಭಿಸುವ ಸಲಹೆ ಯಾವುದೂ ಇಲ್ಲವೆಂದು ಹೇಳಿದ್ದೀರಿ. ಈ ಬಗ್ಗೆ ತಮ್ಮ ವಿಚಿತವಾದ ಅಭಿಪ್ರಾಯ ಏನೆಂಬುದನ್ನು ಸ್ವಲ್ಪ ಸ್ಪಷ್ಟವಾಗಿ ಹೇಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಇನ್ನು ಮುಂದೆ ಅಲ್ಲಿ ಸೆಮಿ ಲಕ್ಷುರಿ ಬಸ್‌ಗಳನ್ನು ಹಾಕುವಂಥ ಸಲಹೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲವೆಂದು ಹೇಳಿದ್ದೇನೆ.

ಶ್ರೀ ಎ. ಜಿ. ಕೊಡಗಿ.—ಸ್ವಾಮಿ, ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೆಮಿ ಲಕ್ಷುರಿ ಬಸ್‌ಗಳ ಬದಲಿಗೆ ಲಕ್ಷುರಿ ಬಸ್‌ಗಳನ್ನು ಹಾಕುತ್ತೇವೆ ಎಂದು ಹೇಳಿದ್ದೀರಿ. ಈಗ ಮಂಗಳೂರಿನಲ್ಲಿ ಲಕ್ಷುರಿ ಬಸ್‌ಗಳನ್ನು ಹಾಕುವುದಲ್ಲದೆ ಉಳಿದ ಉಡುಪಿ, ಕುಂದಾಪುರಗಳಲ್ಲಿ ಸೆಮಿ ಲಕ್ಷುರಿ ಬಸ್‌ಗಳನ್ನು ಏಕ್ ಡ್ರಾ ಪಾಡಿ. ಪುನಃ ಲಕ್ಷುರಿ ಬಸ್‌ಗಳನ್ನೇ ಹಾಕುತ್ತೀರಾ ? ಈ ಬಗ್ಗೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಹೌದು ಪುನಃ ಅಲ್ಲಿ ಲಕ್ಷುರಿ ಬಸ್‌ಗಳನ್ನೇ ಹಾಕುತ್ತೇವೆ.

Rehabilitation of Gandhi families at Kodibag

829. SRI D. V. WAINGANKAR (Karwar).—Will the Minister for Municipal Administration be pleased to state.

(*a*) whether it is a fact that about 15 backward Gondli (Nomadic tribe) families are at Kodibag (within Karwar Municipal limit) for nearly 20 years ;

(*b*) whether it is a fact that they are living in panic conditions in temporary sheds and as such represented to the Administrator, Karwar Municipality to give them house sites and the same was recommended by the Karwar Municipal Advisory Committee,

(*c*) whether it is a fact that public representatives had also represented that the poor people may be helped immediately ;

(*d*) if so, the steps taken by Government to rehabilitate these people ?

SRI H. C. SRIKANTAIAH (Minister for Municipal Administration).—

(*a*) Yes.

(*b*) Their families have represented to the Administrator, Town Municipal Council, Karwar for allotment of sites free of cost. Their request is being considered by the Advisory Council.

(*c*) Yes.

(*d*) Does not arise in view of (*b*).

ಶ್ರೀ ಡಿ. ವಿ. ವೈಗಾಂಕರ್.—ತಪ್ಪು (ಅ) ಉತ್ತರದಲ್ಲಿ ಉಚಿತವಾಗಿ ನಿವೇಶನಗಳನ್ನು ಗೊತ್ತು ಪಡಿಸುವುದಕ್ಕಾಗಿ ಅಲ್ಲಿ ವಾಸಿಸುವ ಕುಟುಂಬದವರು ಕಾರವಾರದ ಪುರಸಭೆಯ ಆಡಳಿತಾಧಿಕಾರಿಯವರಿಗೆ ಮನವಿ ಸಲ್ಲಿಸಿದ್ದಾರೆ. ಅವರ ಚೋರಿಕೆಯನ್ನು ಸಲಹಾ ಸಮಿತಿಯವರು ಪರಿಶೀಲಿಸುತ್ತಿದ್ದಾರೆ ಎಂಬುದಾಗಿ ತಿಳಿಸಿದ್ದೀರಿ. ಅವರು ಮನವಿ ಸಲ್ಲಿಸಿದ್ದು ಯಾವಾಗ ? ಸ್ಥಳ ಪರಿಶೀಲನೆ ಮಾಡಿದ್ದು ಯಾವಾಗ? ಎಂಬುದಾಗಿ ಕೇಳುತ್ತಿದ್ದೇನೆ.